23	ಗದಗ	ರೋಣ ತಾಲ್ಲೂಕು ಗಜೇಂದ್ರಗಡದಲ್ಲಿ ಐ ಬಿ (ವಿ ಐ ಪಿ) ಕಟ್ಟಡ ನಿರ್ಮಾಣ	
24	ಹಾವೇರಿ	ಹಿರೇಕೆರೂರು ತಾ ಚಿಕ್ಕೇರೂರುನಲ್ಲಿ ಪ್ರವಾಸಿ ಮಂದಿರ ನಿರ್ಮಾಣ	
25	ಬೀದರ	ಹುಮನಾಬಾದನಲ್ಲಿ ಲೋಇ ಉಪ ವಿಭಾಗ ಕಚೇರಿ ಕಟ್ಟಡ ನಿರ್ಮಾಣ	
26	ಗದಗ	ಗದಗನಲ್ಲಿ ನ್ಯಾಯಾಲಯ ಸಂಕೀರ್ಣಕ್ಕಾಗಿ ಭೂಸ್ವಾಧೀನಪಡಿಸುವುದು	
27	ರಾಯಚೂರು	ದೇವದುರ್ಗದಲ್ಲಿ ಸಾಕ್ಷಿದಾರರ ಕಕ್ಷೆ ನಿರ್ಮಾಣ	
28	ರಾಯಚೂರು	ಲಿಂಗಸುಗೂರಿನಲ್ಲಿ ಸಾಕ್ಷಿದಾರರ ಕಕ್ಷೆ ನಿರ್ಮಾಣ	
29	ಯಾದಗಿರಿ	ಸೇಡಂನಲ್ಲಿ ನ್ಯಾಯಾಲಯ ಕಟ್ಟಡಕ್ಕೆ ಆವರಣ ಗೋಡೆ ನಿರ್ಮಾಣ	
30	ಯಾದಗಿರಿ	ಸುರಪುರದಲ್ಲಿ ಸಾಕ್ಷಿದಾರರ ಕಕ್ಷೆ ಹಾಗೂ ನಿರೀಕ್ಷಣಾ ಕೋಣೆ ನಿರ್ಮಿಸುವುದು	
31	ಧಾರವಾಡ	ರಾಯಪೂರದಲ್ಲಿರುವ ಆರ್ ಟಿ ಒ ಕಚೇರಿ ಕಟ್ಟಡ ನಿರ್ಮಾಣ ಹಾಗೂ ಆವರಣ ಗೋಡೆ ನಿರ್ಮಿಸುವುದು	

316 (341) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) ಮಾನ್ಯ ಪೌರಾಡಳಿತ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು),

ಆ) ಈ ಪುರಸಭೆಗಳ ಪೈಕಿ ಯಾವುದಾದರೊಂದನ್ನು ನಗರಸಭೆಯನ್ನಾಗಿ ಪರಿವರ್ತಿಸಲು ಸರ್ಕಾರ ಯೋಚಿಸಿದೆಯೇ (ವಿವರ ನೀಡುವುದು),

ಇ) ಅರಸೀಕೆರೆ ಪುರಸಭೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಇದರಿಂದಾಗಿ ನಗರದ ಸ್ವಚ್ಚತೆ ಹಾಗೂ ನೈರ್ಮಲ್ಯ ಕಾರ್ಯ ಸ್ಥಗಿತಗೊಂಡಿರುವುದು ನಿಜವೇ,

ಊ) ಹಾಗಿದ್ದಲ್ಲಿ, ಸ್ವೀಪರ್ಸ್, ವಾಟರ್‌ಮೆನ್, ಬಿಲ್ ಕಲೆಕ್ಟರ್‌ಗಳ ಹುದ್ದೆಗಳು ಸೇರಿದಂತೆ ಬಾಕಿ ಇರುವ ಎಲ್ಲಾ ಹುದ್ದೆಗಳ ನೇಮಕಾತಿಗೆ ಯಾವ ಕ್ರಮವನ್ನು ಕೈಗೊಳ್ಳಲಾಗುತ್ತದೆ,

ಊ) ಅರಸೀಕೆರೆ ಪುರಸಭೆ ವ್ಯಾಪ್ತಿಯ ಹೊಸ ಬಡಾವಣೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಯಾವ ಯೋಜನೆ ರೂಪಿಸಲಾಗುವುದು?

ಶ್ರೀ ಆರ್ ಶ್ರೀನಿವಾಸ್ (ಪೌರಾಡಳಿತ ಸಚಿವರು)

ಅ) ಎಂಟು ವಿಧಾನ ಸಭಾ ಕ್ಷೇತ್ರವಾರು ವಿವರ

ಕ್ರ. ಸಂ	ವಿಧಾನಸಭಾ ಕ್ಷೇತ್ರಗಳು	ಸ್ಥಳೀಯ ಸಮಸ್ಥೆ ಹೆಸರು
1	ಹಾಸನ	ಹಾಸನ ನಗರಸಭೆ
2	ಅರಸೀಕೆರೆ	ಅರಸೀಕೆರೆ ಪುರಸಭೆ
3	ಶ್ರವಣಬೆಳಗೊಳ	ಚನ್ನರಾಯಪಟ್ಟಣ ಪುರಸಭೆ
4	ಹೊಳೆನರಸೀಪುರ	ಹೊಳೆನರಸೀಪುರ ಪುರಸಭೆ
5	ಬೇಲೂರು	ಬೇಲೂರು ಪುರಸಭೆ
6	ಸಕಲೇಶಪುರ	ಸಕಲೇಶಪುರ ಪುರಸಭೆ ಆಲೂರು ಪಟ್ಟಣ ಪಂಚಾಯಿತಿ
7	ಅರಕಲಗೂಡು	ಅರಕಲಗೂಡು ಪಟ್ಟಣ ಪಂಚಾಯಿತಿ
8	ಗಂಡಸಿ ಕ್ಷೇತ್ರ	ಯಾವುದೂ ಇಲ್ಲ

ಆ) ಕರ್ನಾಟಕ ಪುರಸಭೆ ಕಾಯ್ದೆ 1964 ರ ಕಲಂ 3,9 ಮತ್ತು 11 ರನ್ವಯ ಯಾವುದೇ ಪುರಸಭೆಯನ್ನು ನಗರಸಭೆಯನ್ನಾಗಿ ಪರಿವರ್ತಿಸುವ ಬಗ್ಗೆ ಲಕ್ಷಣಗಳು ಹೊಂದಿರುವುದಿಲ್ಲ

ಇ) –ಬಂದಿದೆ–

ಈ) ಇಲ್ಲ ಅರಸೀಕೆರೆ ನಗರದ ವಾರ್ಡ್ 1 ರಿಂದ 10ರ ಸ್ವಚ್ಚತಾ ಕೆಲಸವನ್ನು ಗುತ್ತಿಗೆದಾರರಿಗೆ ನೀಡಲಾಗಿದೆ ಉಳಿದ ವಾರ್ಡುಗಳ ಸ್ವಚ್ಚತೆಯನ್ನು 46 ಪೌರ ಕಾರ್ಮಿಕರು ಮಾಡುತ್ತಿದ್ದು, ಸ್ವಚ್ಚತಾ ಹಾಗೂ ನೈರ್ಮಲ್ಯ ಕಾರ್ಯ ಸ್ಥಗಿತಗೊಂಡಿರುವುದಿಲ್ಲ

ಉ) ವ್ಯಂದ ಮತ್ತು ನೇಮಕಾತಿ ನಿಯಮಾವಳಿ ಪ್ರಕಾರ ಹುದ್ದೆಗಳ ಪ್ರಮಾಣ ನಿಗಧಿಯಾಗಿರುತ್ತದೆ ದಿನಗೂಲಿ ನೌಕರರ ಸೇವೆ ಸಕ್ರಮಗೊಂಡ

ನಂತರ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು

ಊ) ಪುರಸಭೆಯ ಸಮಗ್ರ ಅಭಿವೃದ್ದಿ ನೀಲಿ ನಕ್ಷೆಯನ್ನು ತಯಾರಿಸಲು ಸೂಚನೆ ನೀಡಲಾಗಿದೆ

317 (342) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆಎಸ್ಆರ್‌ಟಿಸಿ ಹಾಸನ ಹಾಗೂ ಚಿಕ್ಕ ಮಗಳುರು ವಿಭಾಗಗಳಲ್ಲಿರುವ ಹಾಲಿ ಡಿಪೋಗಳ ಸಂಖ್ಯೆ ಎಷ್ಟು ಹಾಗೂ ಸದರಿ ಡಿಪೋಗಳಲ್ಲಿರುವ ಬಸ್ಸುಗಳ ಹಾಗೂ ಚಾಲಕ ನಿರ್ವಾಹಕರ ಸಂಖ್ಯೆ ಎಷ್ಟು, (ವಿವರ ನೀಡುವುದು),

ಆ) ಈ ವಿಭಾಗಗಳ ವ್ಯಾಪ್ತಿಯಲ್ಲಿ ಇನ್ನೂ ಹೊಸದಾಗಿ ಬಸ್ ಡಿಪೋ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ, ಹಾಗಿದ್ದಲ್ಲಿ ಎಲ್ಲೆಲ್ಲಿ ಸ್ಥಾಪಿಸಲಾಗುವುದು, (ವಿವರ ನೀಡುವುದು),

ಇ) ಈ ವೈಕಿ ಸದರಿ ಡಿಪೋಗಳಿಗೆ ಹೊಸದಾಗಿ ಎಷ್ಟು ಬಸ್ಸುಗಳನ್ನು ಒದಗಿಸಲಾಗುವುದು, (ಡಿಪೋಗಳವಾರು ವಿವರ ಒದಗಿಸುವುದು),

ಈ) ಇವುಗಳ ವ್ಯಾಪ್ತಿಯ ಬಸ್ ನಿಲ್ದಾಣದ ಸುಧಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ, ಹಾಗೂ ಹೊಸ ಬನ್ ನಿಲ್ದಾಣಗಳನ್ನು ಸ್ಥಾಪಿಸಲು ಉದ್ದೇಶಿಸಿದೆಯೇ,

ಉ) ಮೇಲಿನ ವಿಭಾಗಗಳ ಎಲ್ಲಾ ಡಿಪೋಗಳ ಮೂಲಕ ವಹಿವಾಟು ಆದಾಯ-ಖರ್ಚುಗಳೆಷ್ಟು, (ವಿವರ ನೀಡುವುದು),

ಊ) ಕಲೆಕ್ಷನ್ ಕಡಿಮೆಯಾದರೆ ಹಾಗೂ ಬಸ್ಸಿಗೆ ಹೆಚ್ಚು ಡೀಸಲ್ ಖರ್ಚಾದರೆ ಬನ್ ನಿರ್ವಾಹಕರ ಹಾಗೂ ಚಾಲಕರ ಮೇಲೆ ದಂಡ ವಿಧಿಸುವ ಕ್ರಮ ಸರಿಯೇ,

ಋ) ಮಹಿಳಾ ನಿರ್ವಾಹಕಿಯರಿಗೆ ಹೆರಿಗೆ ರಜಾ ಸೌಲಭ್ಯ ಕಲ್ಪಿಸಲಾಗಿದೆಯೇ,

ಋೂ) ಹಾಗಿಲ್ಲದಿದ್ದಲ್ಲಿ ಆದಕ್ಕೆ ಕಾರಣವೇನು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಹಾಸನ ಮತ್ತು ಚಿಕ್ಕಮಗಳೂರು ವಿಭಾಗಗಳಲ್ಲಿ ತಲಾ 5 ಘಟಕಗಳಿವೆ